# JULY 01, 2025
# AKASHAVANI - DHARWAD
# PRADESH SAMACHARA (KANNADA) 12.00 P.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

1. ದ್ವಿತೀಯ ಪಿ.ಯು.ಸಿ. ವಾರ್ಷಿಕ ಪರೀಕ್ಷೆ 3 ರ, ಫಲಿತಾಂಶವನ್ನು, ಇಂದು ಮಧ್ಯಾಹ್ನ 1 ಗಂಟೆಯ ಬಳಿಕ, ಜಾಲತಾಣ – kar results.nic.in ನಲ್ಲಿ ಪಡೆಯಬಹುದು ಎಂದು, ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ನಿರ್ದೇಶಕರು, ತಿಳಿಸಿದ್ದಾರೆ. ಪ್ರಸಕ್ತ ಸಾಲಿನ, ದ್ವಿತೀಯ ಪಿ.ಯು.ಸಿ. ಪರೀಕ್ಷೆ ಮೂರನ್ನು, ಕಳೆದ ಜೂನ್ 9 ರಿಂದ 20ರ ವರೆಗೆ ನಡೆಸಲಾಗಿತ್ತು.

<><><>

2. ವಿಜಯನಗರ ಜಿಲ್ಲೆ, ಹೊಸಪೇಟೆಯ, ತುಂಗಭದ್ರಾ ಜಲಾಶಯದಲ್ಲಿ, ತಜ್ಞರ ಸಲಹೆ ಆಧರಿಸಿ, 80 ಟಿ.ಎಂ.ಸಿ. ಅಡಿ ನೀರನ್ನು ಮಾತ್ರ ಸಂಗ್ರಹಿಸಲು, ತುಂಗಭದ್ರಾ ಮಂಡಳಿ ನಿರ್ಧರಿಸಿದೆ. ನಿತ್ಯ 25 ಸಾವಿರ ಕ್ಯೂಸೆಕ್ ನಷ್ಟು ನೀರನ್ನು, ನದಿಗೆ ಹರಿ ಬಿಡಲಾಗುತ್ತಿದೆ. ರಾಯಚೂರು, ಬಳ್ಳಾರಿ, ಕೊಪ್ಪಳ ಮತ್ತು ವಿಜಯನಗರ ಜಿಲ್ಲೆಯ ನದಿ ಪಾತ್ರದ ಜನ ಮುನ್ನೆಚ್ಚರಿಕೆ ವಹಿಸಲು, ಸೂಚಿಸಲಾಗಿದೆ. ಅಣೆಕಟ್ಟೆಗೆ ಒಳ ಹರಿವು ಹೆಚ್ಚಿದ ಹಿನ್ನೆಲೆ, ಆಂಧ್ರಪ್ರದೇಶ ಹಾಗೂ ತೆಲಂಗಾಣ ರಾಜ್ಯಗಳಿಗೂ, ಎಚ್ಚರಿಕೆ ಸಂದೇಶ ಕಳುಹಿಸಲಾಗಿದೆ.

<><><>

3. ಹುಬ್ಬಳ್ಳಿಯ, ರಾಜ್ಯ ಸಮಾಚಾರ ಕೇಂದ್ರಕ್ಕೆ, ಟಾಟಾ ಮಾಣಿಕಬಾಗ್ ಅಟೊಮೊಬೈಲ್ಸ್ ಸಂಸ್ಥೆ, ಸಾಮಾಜಿಕ ಹೊಣೆಗಾರಿಕೆ ನಿಧಿ ಅಡಿ ನೀಡಿದ, ಪತ್ರಕರ್ತರ ಸಂಚಾರಿ ವಾಹನಕ್ಕೆ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ವಾರ್ತಾ ಇಲಾಖೆಗೆ ಹಸ್ತಾಂತರಿಸಿದರು.

<><><>

4. ಹಿರಿಯ ಸಾಹಿತಿ, ಬರಗೂರು ರಾಮಚಂದ್ರಪ್ಪ ಅವರಿಗೆ, ಬೆಳಗಾವಿಯ ಬಸವರಾಜ ಕಟ್ಟಿಮನಿ ಪ್ರತಿಷ್ಠಾನದ, ರಾಜ್ಯ ಮಟ್ಟದ ಕಟ್ಟೀಮನಿ ಕಾದಂಬರಿ ಪ್ರಶಸ್ತಿಯನ್ನು, ಬೆಳಗಾವಿ ಜಿಲ್ಲೆ ಉಸ್ತುವಾರಿ ಸಚಿವ, ಸತೀಶ ಜಾರಕಿಹೊಳಿ, ಬೆಳಗಾವಿಯ ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಮಹಾವಿದ್ಯಾಲಯದಲ್ಲಿ ಪ್ರದಾನಿಸಿ, ಗೌರವಿಸಿದರು.

<><><>

5. ಕೇಂದ್ರ ಅರಣ್ಯ ಮತ್ತು ಪರಿಸರ ಇಲಾಖೆ, ಗದಗ ಜಿಲ್ಲೆಯ ಕಪ್ಪತ್ತ ಗುಡ್ಡದ, 322 ಚದರ ಕಿಲೋ ಮೀಟರ್ ಪ್ರದೇಶವನ್ನು, ಪರಿಸರ ಸೂಕ್ಷ್ಮ ವಲಯವೆಂದು, ಘೋಷಿಸಿದೆ. ಕಪ್ಪತ್ತಗುಡ್ಡ ವನ್ಯಜೀವಿ ಧಾಮದಲ್ಲಿ, ಅರಣ್ಯ ಇಲಾಖೆ, ಬೀಜದ ಉಂಡೆಗಳನ್ನು ಪಸರಿಸುವ, 'ಬೀಜ ಬಿತ್ತೋತ್ಸವ' ಅಭಿಯಾನ ಆಯೋಜಿಸಿದೆ. ಮುಂಡರಗಿ ಉಪ ವಲಯ ಅರಣ್ಯ ಸಂರಕ್ಷಣಾಧಿಕಾರಿ, ಮಂಜುನಾಥ ಮೇಗಳಮನಿ, ಈ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ.

<><><>

ಮಂಜುನಾಥ ಮೇಗಳಮನಿ ಧ್ವನಿ 28 ಸೆಕೆಂದುಗಳು

<><><>

6. ಯು.ಎಸ್. ಓಪನ್ ಸೂಪರ್ 300, ಬ್ಯಾಡ್ಮಿಂಟನ್ ಪಂದ್ಯಾವಳಿಯ, ಪುರುಷರ ವಿಭಾಗದಲ್ಲಿ, ಸಿಂಗಲ್ಸ್ ಪ್ರಶಸ್ತಿ ಗೆದ್ದ, ರಾಜ್ಯದ ಬ್ಯಾಡ್ಮಿಂಟನ್ ಪಟು, ಆಯು ್ ಶೆಟ್ಟಿ ಅವರನ್ನು, ಮುಖ್ಯಮಂತ್ರಿ ಸಿದ್ದರಾಮಯ್ಯ, ಎಕ್ಸ್ ಮಾಧ್ಯಮದಲ್ಲಿ ಅಭಿನಂದಿಸಿದ್ದಾರೆ. ಸಮರ್ಪಣೆ ಮತ್ತು ಧೈರ್ಯದಿಂದ ಕರ್ನಾಟಕ ಮತ್ತು ಭಾರತ ಹೆಮ್ಮೆಪಡುವಂತೆ, ಕ್ರೀಡಾಸ್ಫೂರ್ತಿ ಮೆರೆದಿದ್ದಕ್ಕೆ, ಆಯುಷ್ ಶೆಟ್ಟಿ ಅವರನ್ನು ಮುಖ್ಯಮಂತ್ರಿ ಶ್ಲಾಘಿಸಿದ್ದಾರೆ.

<><><>

7. ಕಲಬುರಗಿ ಜಿಲ್ಲೆಯ ವಿವಿಧ ಆಸ್ಪತ್ರೆಗಳು ಹಾಗೂ ಕಾರಾಗೃಹಗಳಲ್ಲಿ, ಮನೋಚೈತನ್ಯ ಕಾರ್ಯಕ್ರಮದಡಿ, ಇಂದಿನಿಂದ 26ರ ವರೆಗೆ, ಮನೋ ಆರೋಗ್ಯ ಚಿಕಿತ್ಸಾ ಶಿಬಿರ ಆಯೋಜಿಸಲಾಗಿದೆ ಎಂದು, ಜಿಲ್ಲಾ ಮನೋ ಆರೋಗ್ಯ ಕಾರ್ಯಕ್ರಮ ಅಧಿಕಾರಿ ತಿಳಿಸಿದ್ದಾರೆ.

<><><>

8. ವಚನ ಪಿತಾಮಹ ಫ.ಗು. ಹಳಕಟ್ಟಿ ಅವರ ಜನ್ಮ ದಿನಾಚರಣೆ ಪ್ರಯುಕ್ತ, ಕಲಬುರಗಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ, ಸುವರ್ಣ ಸಭಾ ಭವನದಲ್ಲಿ, ನಾಳೆ ಬೆಳಗ್ಗೆ 11 ಗಂಟೆಗೆ, ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆ ಆಯೋಜಿತವಾಗಿದೆ.

<><><>

9. ಉಡುಪಿ ತೆಂಕ ನಿಡಿಯೂರು, ಸರ್ಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯದ, ಸ್ನಾತಕೋತ್ತರ ಅಧ್ಯಯನ ಕೇಂದ್ರದದಲ್ಲಿ, ನಾಳೆ ಬೆಳಗ್ಗೆ 10 ಗಂಟೆಗೆ, ಜಿಲ್ಲಾ ಉಸ್ತುವಾರಿ ಸಚಿವರಾದ ಲಕ್ಷ್ಮೀ ಹೆಬ್ಬಾಳಕರ, ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆ ಉದ್ಘಾಟಿಸಲಿದ್ದಾರೆ.

<><><>

10. ಚಿಕ್ಕಬಳ್ಳಾಪುರ ಜಿಲ್ಲೆ, ನಂದಿ ಗಿರಿಧಾಮದಲ್ಲಿ, ರಾಜ್ಯ ವಿಶೇಷ ಸಚಿವ ಸಂಪುಟ ಸಭೆ, ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ, ನಾಳೆ ಜರುಗಲಿದೆ ಎಂದು, ಜಿಲ್ಲಾ ಉಸ್ತುವಾರಿ ಸಚಿವ ಎಂ.ಸಿ. ಸುಧಾಕರ ತಿಳಿಸಿದ್ದಾರೆ.

<><><>

11. ಬಾಲ ಹಾಗೂ ಕಿಶೋರ ಕಾರ್ಮಿಕ ಪದ್ಧತಿ ನಿರ್ಮೂಲನೆಗೆ, ಸರ್ಕಾರದ ಎಲ್ಲ ಇಲಾಖೆಗಳು ಸೇರಿದಂತೆ, ಸರ್ಕಾರೇತರ ಸಂಸ್ಥೆಗಳ ಸಹಕಾರ ಅಗತ್ಯ ಎಂದು, ಯಾದಗಿರಿ ಜಿಲ್ಲೆ, ಹಿರಿಯ ಸಿವಿಲ್ ನ್ಯಾಯಾಧೀಶ ಮರಿಯಪ್ಪ ಹೇಳಿದ್ದಾರೆ. ಕಳೆದ ಜೂನ್ 1 ರಿಂದ, ಬರುವ ಆಗಸ್ಟ್ 31ರ ವರೆಗೆ, ಬಾಲ ಕಾರ್ಮಿಕ ಮಕ್ಕಳ ರಕ್ಷಣೆ ಹಾಗೂ ಪುನರ್ವಸತಿ ಕಲ್ಪಿಸುವ ಅಭಿಯಾನದಲ್ಲಿ, ಕೈಜೋಡಿಸುವಂತೆ, ಮನವಿ ಮಾಡಿದರು.

<><><>

12. ಕರ್ನಾಟಕ ರೈತ ಸುರಕ್ಷಾ, ಪ್ರಧಾನಮಂತ್ರಿ ಬೆಳೆ ವಿಮೆ ಯೋಜನೆ ಮಾಹಿತಿ ಪತ್ರಗಳನ್ನು, ಕೊಪ್ಪಳ ಶಾಸಕ ರಾಘವೇಂದ್ರ ಹಿಟ್ನಾಳ ಹಾಗೂ ಜಿಲ್ಲಾಧಿಕಾರಿ ಸುರೇಶ ಇಟ್ನಾಳ ಬಿಡುಗಡೆಗೊಳಿಸಿದರು.

<><><>

13. ವಿಜಯನಗರ ಜಿಲ್ಲೆ, ಹಗರಿಬೊಮ್ಮನಹಳ್ಳಿ ತಾಲೂಕಿನ, ಪುರಸಭೆ ವ್ಯಾಪ್ತಿಯಲ್ಲಿ, 2ನೇ ಆವೃತ್ತಿಯ, ಪ್ರಧಾನಮಂತ್ರಿ ಅವಾಸ್ ನಗರ ಯೋಜನೆ ಅಡಿ, ಅರ್ಹ ಫಲಾನುಭವಿಗಳಿಂದ, ಅರ್ಜಿ ಆಹ್ವಾನಿಸಲಾಗಿದೆ ಎಂದು ಪುರಸಭೆ ಮುಖ್ಯಾಧಿಕಾರಿ ತಿಳಿಸಿದ್ದಾರೆ.

<><><>

14. ಯುವ ಸಲೀಕರಣ ಮತ್ತು ಕ್ರೀಡಾ ಇಲಾಖೆ, 'ಯುವ ಚೈತನ್ಯ' ಯೋಜನೆಯಡಿ, ಉಡುಪಿ ಜಿಲ್ಲೆಯಲ್ಲಿ, ಕ್ರೀಡಾ ಕಿಟ್ ಸೌಲಭ್ಯಕ್ಕಾಗಿ, ಅರ್ಜಿ ಸಲ್ಲಿಸಲು, ಈ ತಿಂಗಳ 15 ಕೊನೆ ದಿನವಾಗಿದೆ.

<><><>

15. ಹೊಸ ದಿಲ್ಲಿಯ ವಿಶ್ವವಿದ್ಯಾಲಯ ಧನ ಸಹಾಯ ಆಯೋಗ, ದೇಶದಾದ್ಯಂತ ನಾಲ್ಕು ಐ.ಐ.ಟಿ.ಗಳು, ಮೂರು ಐ.ಐ.ಎಂ.ಗಳೂ ಸೇರಿ, ಒಟ್ಟು 89 ಶೈಕ್ಷಣಿಕ ಸಂಸ್ಥೆಗಳಿಗೆ, ರ್‍ಯಾಗಿಂಗ್ ನಿ ೀಧ ಸಂಬಂಧಿತ ನಿಯಮಾವಳಿ ಪಾಲಿಸದ ಕಾರಣ, ನೋಟಿಸ್ ಜಾರಿ ಮಾಡಿದೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.

<><><>

ಹರ್ಷ